# ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವ

ಪ್ರೊ. ಎನ್. ಕೃಷ್ಣಸ್ವಾಮಿ

ಸ್ವಾಮಿ ವಿವೇಕಾನಂದರ ಪ್ರಖರವಾದ ವೈಚಾರಿಕತೆ (Rationalism) ಸಾಮಾನ್ಯರಿಗೆ ಪರಿಚಯವಿದ್ದರೂ ಅವರಲ್ಲಿ ಬೇರುಬಿಟ್ಟಿದ್ದ ವೈಜ್ಞಾನಿಕ ಮನೋಭಾವ, ವಿಜ್ಞಾನದ ಅಂದಿನ ಆವಿಷ್ಕಾರಗಳಲ್ಲಿ ಅವರು ತಳೆದಿದ್ದ ತೀವ್ರವಾದ ಆಸಕ್ತಿ ಮತ್ತು ವೇದಾಂತದ ಚಿಂತನೆಗಳೊಡನೆ ಅವುಗಳಿಗಿರುವ ಸಾಮರಸ್ಯವನ್ನು ಕಾಣುವ ಪ್ರಯತ್ನ—ಇವುಗಳನ್ನು ಕುರಿತಾದ ಲೇಖನಗಳು ಕನ್ನಡದಲ್ಲಿ ಅಪರೂಪ. ಬಹಳ ದೀರ್ಘಕಾಲ ವೃತ್ತಿಯಲ್ಲಿ ವಿಜ್ಞಾನಿಗಳಾಗಿ ಭಾರತ ಸರ್ಕಾರ ದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರೊ.ಎನ್ ಕೃಷ್ಣಸ್ವಾಮಿ ಯವರ ಈ ಲೇಖನ ಸ್ವಾಮಿ ವಿವೇಕಾನಂದರ ವೈಜ್ಞಾನಿಕ ಮನೋಭಾವ ವನ್ನು ಕುರಿತ ಇತ್ತೀಚಿನ ಮಾಹಿತಿಗಳನ್ನೊಳಗೊಂಡಿದೆ. ಲೇಖಕರು ಬೆಂಗಳೂರಿನಲ್ಲಿರುವ ಸ್ವಾಮಿ ವಿವೇಕಾನಂದ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ.

ಭಾರತದ ಸಂವಿಧಾನದ ಆದಿಭಾಗದಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು ಪ್ರತಿಯೊಬ್ಬ ಭಾರ ತೀಯನ ಕರ್ತವ್ಯ ಎಂದು ವಿಧಿಸಲಾಗಿದೆ. ವೈಜ್ಞಾನಿಕ ಮನೋ ಭಾವವೆಂದರೆ ಪ್ರಶ್ನಿಸುವ ಮನೋಭಾವ, ಪ್ರಶ್ನೆ ಮಾಡದೆ ಏನನ್ನೂ ಒಪ್ಪಿಕೊಳ್ಳಬಾರದು ಎಂಬ ನಿರ್ಧಾರ. ಆದುದರಿಂದಲೇ ಡಾ. ನರಸಿಂಹಯ್ಯನವರು ನ್ಯಾಶನಲ್ ಕಾಲೇಜಿನ ತಮ್ಮ ಕಛೇರಿ ಯಲ್ಲಿ ತಮ್ಮ ಕುರ್ಚಿಯ ಹಿಂದೆ ಎಲ್ಲರಿಗೂ ಕಾಣುವ ಹಾಗೆ ಒಂದು ಪ್ರಶ್ನಾರ್ಥಕ ಚಿಹ್ನೆ(?)ಯನ್ನು ದೊಡ್ಡದಾಗಿ ಬರೆಯಿಸಿ ಹಾಕಿದ್ದಾರೆ.

ಈ ಮನೋಭಾವವನ್ನು ಸ್ವಾಮಿ ವಿವೇಕಾನಂದರಲ್ಲಿ ನಾವು ಬಹು ದೃಢವಾಗಿರುವುದನ್ನು ಕಾಣಬಹುದು. ಪ್ರಶ್ನಿಸುವ ಗುಣ ಅವರಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮನೆ ಮಾಡಿರುವುದು ಕಂಡು ಬರುತ್ತದೆ. ಅವರ ಬಾಲ್ಯದ ಒಂದು ಘಟನೆ—

## ಮರಕೋತಿಯ ಆಟ

ಕೆಲವರು ಹುಡುಗರೊಡನೆ ನರೇಂದ್ರ—ಹುಡುಗ ವಿವೇಕಾ ನಂದ—ನೆರೆಹೊರೆಯ ಒಂದು ಮನೆಗೆ ಹೋಗಿ ಅಲ್ಲಿದ್ದ ಮರ ಒಂದರಲ್ಲಿ ಮರಕೋತಿ ಆಟ ಆಡುತ್ತಿದ್ದ. ಸ್ವಾಭಾವಿಕವಾಗಿಯೇ ಆಟ ಆಡುವಾಗ ಗಲಾಟೆ ಆಗುತ್ತಿದ್ದಿತು. ಮನೆಯ ಮಾಲೀಕ ಒಬ್ಬ ಮುದುಕ. ಅವನಿಗೆ ಈ ಗಲಭೆ ಸಹಿಸಲಾಗದೆ ಹುಡುಗರನ್ನು ಸಾಗಹಾಕಲು ಒಂದು ಉಪಾಯ ಹೂಡಿದ. ಹುಡುಗರನ್ನು ಕರೆದು ಹೇಳಿದ: "ಮಕ್ಕಳಿರಾ, ಆ ಮರದ ಮೇಲೆ ಆಟ ಆಡಬೇಡಿ, ಏಕೆಂದರೆ ಅದರಲ್ಲಿ ಒಬ್ಬ ಬ್ರಹ್ಮ ರಾಕ್ಷಸ ಇದ್ದಾನೆ. ನಿಮ್ಮನ್ನು ಕತ್ತು ಮುರಿದು ಕೊಂದುಹಾಕಿ ಬಿಡುತ್ತಾನೆ. ಹುಷಾರು!" ಹೆದರಿಕೊಂಡು ಹುಡುಗರೆಲ್ಲ ಅಲ್ಲಿಂದ ಕಾಲ್ತೆಗೆದರು. ನರೇಂದ್ರ ಮಾತ್ರ ಪುನಃ ಮರ ಹತ್ತಿದ. ಅವನ ಸ್ನೇಹಿತರು, "ನರೇಂದ್ರ, ತಾತ ಹೇಳಲಿಲ್ಲವೆ, ಅದು ಭೂತ ಇರುವ ಮರ, ಇಳಿದುಬಿಡು!" ಎಂದರು. ಆಗ ಅವನು ಹೇಳಿದ, "ಅಯ್ಯೋ ಬೆಪ್ಪರೆ, ಅವರು ಹೇಳಿದರು ಎಂದು ನಂಬಿಬಿಟ್ಟಿರಾ? ಮರದ ಮೇಲೆ ಬ್ರಹ್ಮರಾಕ್ಷಸ ಇದ್ದಿದ್ದರೆ ಅವನು ಯಾವತ್ತೋ ನಮಗೆ ಹಾನಿ ಮಾಡಿರುತ್ತಿದ್ದನು. ಬ್ರಹ್ಮರಾಕ್ಷಸನೂ ಇಲ್ಲ, ಯಾರೂ ಇಲ್ಲ. ಸುಮ್ಮನೆ ನಮ್ಮನ್ನು ಹೆದರಿಸಲು ಆ ತಾತ ಹಾಗೆ ಹೇಳಿದ್ದಾನೆ, ಅಷ್ಟೆ." ಇದನ್ನು ಕೇಳಿ ಹುಡುಗರೆಲ್ಲ ಮತ್ತೆ ಮರ ಹತ್ತಿದರು.

ಆ ತಾತ ಯಾರು, ಗೊತ್ತೆ? ಅವರು ಮುಂದೆ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ವಿರಜಾನಂದರ ತಾತ! ವಿರಜಾ ನಂದರು ಸ್ವಾಮಿ ವಿವೇಕಾನಂದರ ಶಿಷ್ಯ!

## ಗುರುಗಳ ಪರೀಕ್ಷೆ

ಈ ವೈಜ್ಞಾನಿಕ ಮನೋಭಾವ ನರೇಂದ್ರನಲ್ಲಿ ಯುವಕನಾಗಿ ದ್ದಾಗಲೂ ಪ್ರಬಲವಾಗಿದ್ದಿತು. ನರೇಂದ್ರನ ಗುರುಗಳಾದ ಶ್ರೀರಾಮ ಕೃಷ್ಣರಿಗೆ ಎಂತಹ ಉತ್ಕಟ ವೈರಾಗ್ಯ ಇದ್ದಿತೆಂದರೆ ಅವರು ನಾಣ್ಯಗಳನ್ನು ಮುಟ್ಟುತ್ತಿರಲಿಲ್ಲ. ಚಿನ್ನ, ಬೆಳ್ಳಿಗಳು ಮೈಗೆ ತಗುಲಿದರೆ ಅವರಿಗೆ ನೋವಾಗುತ್ತಿದ್ದಿತು. ಆದುದರಿಂದ ಅವರು ಯಾವುದೇ ಲೋಹವನ್ನು ಮುಟ್ಟುತ್ತಲೇ ಇರಲಿಲ್ಲ. ಇದೇನು ಸತ್ಯವೋ ಅಥವಾ ನಟನೆಯೋ ಎಂದು ಪರೀಕ್ಷಿಸಬೇಕೆಂದು ನಿಶ್ಚಯಿಸಿ ಒಂದು ದಿನ ರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ಇಲ್ಲದಿದ್ದಾಗ ಅವರ ಹಾಸಿಗೆಯ ಕೆಳಗೆ ನರೇಂದ್ರ ಒಂದು ಬೆಳ್ಳಿ ರೂಪಾಯಿ ನಾಣ್ಯವನ್ನು ಇರಿಸಿದ. ಆಮೇಲೆ ಪರಮ ಹಂಸರು ಒಳಗೆ ಬಂದು ಆ ಹಾಸಿಗೆಯ ಮೇಲೆ ಕುಳಿತಾಗ ಏನೋ ಕಡಿದಂತಾಯಿತು. ಹಾಸಿಗೆಯ ಮೇಲೆ ಕುಳಿತುಕೊಳ್ಳಲಾಗದೆ ಚಡಪಡಿಸಿದರು. ಆಗ ಹಾಸಿಗೆಯನ್ನು ಶೋಧಿಸಿದರೆ ಅಲ್ಲಿ ಈ ರೂಪಾಯಿ ಕಾಣಿಸಿತು. ತಕ್ಷಣ ಅವರು ನರೇಂದ್ರನೇ ಈ ಕೆಲಸ ಮಾಡಿದವನೆಂದು ತಿಳಿದುಕೊಂಡರು. ಅವನ ಈ ಪರೀಕ್ಷೆಯ ಮನೋಭಾವವನ್ನು ಅವರು ಮೆಚ್ಚಿಕೊಂಡರು. ಗುರುಗಳೂ ಸಹ ತಮ್ಮ ಶಿಷ್ಯರನ್ನು ಅವರದೇ ಆದ ಅನೇಕ ಪರೀಕ್ಷೆಗಳಿಗೆ ಒಳಪಡಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ ಪರಿವ್ರಾಜಕರಾಗಿ ಭಾರತದ ಉದ್ದಗಲ ಸಂಚರಿಸಿದರು. ಆ ಸಂದರ್ಭದಲ್ಲಿ ಭಾರತದ ದೀನ ದರಿದ್ರ ಜನತೆಯ ಶೋಚನೀಯ ಸ್ಥಿತಿಯನ್ನು ಕಂಡು ಮರುಗಿದರು. ಭಾರತದ ಜನರ ದಾರಿದ್ರ್ಯವನ್ನು ನಿವಾರಿಸುವುದು ನಮ್ಮ ಕರ್ತವ್ಯ ಎಂದು ಅವರು ನಿಶ್ಚಯಿಸಿದರು. ತಮ್ಮ ಅನುಭವದ ಹಿನ್ನೆಲೆಯಲ್ಲಿ ಅವರು ಚಿಂತನೆ ಮಾಡಿದುದರ ಫಲವಾಗಿ ಭಾರತದ ಉದ್ಧಾರವಾಗಬೇಕಾದರೆ ಜನರು ಸರಿಯಾದ ಶಿಕ್ಷಣ ಪಡೆಯಬೇಕು, ವಿದ್ಯಾಭ್ಯಾಸ ಪಡೆದು ಮೂಢನಂಬಿಕೆಗಳ ಸೆರೆಯಿಂದ ಮುಕ್ತರಾಗಿ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಆಗಬೇಕು. ಇದಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಅವರಿಗೆ ನೆರವಾಗುವುದೆಂದು ಸ್ವಾಮೀಜಿ ಮನಗಂಡರು. ಆದುದರಿಂದ ಪಶ್ಚಿಮ ದೇಶಗಳಿಗೆ ಪ್ರಯಾಣ ಮಾಡಿ ಅಲ್ಲಿಂದ ದ್ರವ್ಯ, ವಿಜ್ಞಾನ, ತಂತ್ರಜ್ಞಾನಗಳನ್ನು ಭಾರತಕ್ಕೆ ತಂದು ದೇಶದ ಉದ್ಧಾರ ಮಾಡಬೇಕೆಂದು ವಿವೇಕಾನಂದರು ನಿರ್ಧರಿಸಿದರು. ಅವರ ಯೋಜನೆಗೆ ಮದರಾಸಿನಲ್ಲಿ ಪುಷ್ಟಿ ದೊರಕಿತು. ಖೇತಡಿಮಹಾರಾಜರು ಅವರನ್ನು ತಮ್ಮ ಊರಿಗೆ ಕರೆಸಿಕೊಂಡು ಪ್ರಯಾಣಕ್ಕೆ ಅಗತ್ಯವಾದ ಎಲ್ಲ ಏರ್ಪಾಡುಗಳನ್ನು ಮಾಡಿ ತಮ್ಮ ಕಾರ್ಯದರ್ಶಿಯನ್ನು ಮುಂಬಯಿವರೆಗೆ ಸ್ವಾಮೀಜಿಯವರ ಜೊತೆಗೆ ಅವರ ಸಹಾಯಕ್ಕಾಗಿ ಕಳುಹಿಸಿದರು. ಮುಂಬೈನಿಂದ ಕೊಲಂಬೊ, ಸಿಂಗಾಪುರ, ಟೋಕಿಯೋ ಮೂಲಕ ಅಮೆರಿಕದ ಕೆನಡಾದ ಪಶ್ಚಿಮ ತೀರದ ವಾಂಕೊವರ್ ನಗರವನ್ನು ನೌಕಾಪ್ರಯಾಣದ ನಂತರ ವಿವೇಕಾನಂದರು ಸೇರಿದರು. ಜಪಾನಿನಿಂದ ಅಮೆರಿಕದವರೆಗೆ ಹಡಗಿನಲ್ಲಿ ಅವರ ಸಹ ಪ್ರಯಾಣಿಕರಾಗಿದ್ದವರು ಪ್ರಸಿದ್ಧ ವಾಣಿಜ್ಯೋದ್ಯಮಿ ಜಮ್‌ಶೇಟ್‌ಜಿ ಟಾಟಾ. ಸ್ವಾಮೀಜಿ ಮತ್ತು ಟಾಟಾ ಭಾರತದ ಭವಿಷ್ಯದ ವಿಷಯದಲ್ಲಿ ಚರ್ಚೆ ನಡೆಸಿದರು.

### ಟಾಟಾ ಇನ್‌ಸ್ಟಿಟ್ಯೂಟ್

ಪ್ರಯಾಣದ ಸಮಯದಲ್ಲಿ ಟಾಟಾ ಮತ್ತು ವಿವೇಕಾನಂದರು ನಡೆಸಿದ ಚರ್ಚೆಯಲ್ಲಿ ವಿವೇಕಾನಂದರು ಟಾಟಾಗೆ ಉನ್ನತ ವೈಜ್ಞಾನಿಕ ಸಂಶೋಧನೆ ಮತ್ತು ಬೋಧನೆ ಮಾಡುವ ಒಂದು ಸಂಸ್ಥೆಯನ್ನು ಸ್ಥಾಪಿಸಲು ಉತ್ತೇಜನ ಕೊಟ್ಟರು. ಭಾರತಕ್ಕೆ ಹಿಂದಿರುಗಿದ ಮೇಲೆ ಟಾಟಾ ನಡೆಸಿದ ಪ್ರಯತ್ನಗಳ ಫಲವಾಗಿ ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸ್ಥಾಪನೆ ಆಯಿತು. ಇಂದಿಗೂ ಈ ಸಂಸ್ಥೆ ಟಾಟಾ ಇನ್‌ಸ್ಟಿಟ್ಯೂಟ್ ಎಂದು ಪ್ರಸಿದ್ಧವಾಗಿದೆ. ಈ ವಿಷಯವಾಗಿ ಜಮ್‌ಶೆಟ್‌ಜಿ ಅವರು ಸ್ವಾಮೀಜಿಯವರಿಗೆ ಬರೆದ ಪತ್ರವೊಂದರಲ್ಲಿ ಹೀಗೆ ಹೇಳಿದ್ದಾರೆ—

ಎಸ್‌ಪ್ಲನೇಡ್ ಹೌಸ್, ಮುಂಬಯಿ
೨೩ ನೇ ನವೆಂಬರ್ ೧೮೯೮.

**ನಿಮ್ಮೊಡನೆ ನಡೆಸಿದ ಚರ್ಚೆಗಳ ಪ್ರಭಾವದಿಂದ ನಾನು ಭಾರತದಲ್ಲಿ ವೈಜ್ಞಾನಿಕ ಸಂಶೋಧನಾ ಕೇಂದ್ರವೊಂದನ್ನು ಆರಂಭಿಸುತ್ತಿರುವ ಸಮಾಚಾರ ನಿಮಗೆ ತಿಳಿದಿರಬಹುದು. ತಾಮಸಿಕ ಚೈತನ್ಯದ ಉಪಯೋಗ ಇದಕ್ಕಿಂತ ಉತ್ತಮವಾಗಿ ನಡೆಯಲಾರದು ಎಂದು ನಾನು ತಿಳಿದಿದ್ದೇನೆ. ಇಂತಹ ಭಾವನೆಯ ಜನರಿಗಾಗಿ ಆಶ್ರಮಗಳು ಅಥವಾ ವಾಸಗೃಹ**



ಜಮ್‌ಶೆಟ್‌ಜಿ ಟಾಟಾ

ಗಳನ್ನು ಕಟ್ಟಬೇಕು. ಅಲ್ಲಿ ಅವರು ಸರಳವಾಗಿ ಆದರೂ ಮರ್ಯಾದೆಯಿಂದ ಬಾಳುತ್ತಾ ತಮ್ಮ ಜೀವನವನ್ನೇ ಭೌತಿಕ ಮತ್ತು ಮಾನವಿಕ ವಿಜ್ಞಾನದ ಮುನ್ನಡೆಗಾಗಿ ಸವೆಸುವರು. ಯೋಗ್ಯವಾದ ಮುಖಂಡನ ನೇತೃತ್ವದಲ್ಲಿ ಇಂತಹ ವೈಜ್ಞಾನಿಕ ತಪಸ್ಸು ನಡೆದರೆ—ಐಹಿಕಾಭ್ಯುದಯ, ವಿಜ್ಞಾನ, ಭಾರತದ ಖ್ಯಾತಿ—ಇವೆಲ್ಲವನ್ನೂ ಸಾಧಿಸಬಹುದು. ನಮ್ಮ ಪುರಾತನ ಸಂಸ್ಕೃತಿಯನ್ನು ಈ ದಿಸೆಯಲ್ಲಿ ಪುನರುಜ್ಜೀವನಗೊಳಿಸಲು ನಿಮಗಿಂತ (ಸ್ವಾಮಿ ವಿವೇಕಾನಂದರಿಗಿಂತ) ಅರ್ಹರಾದವರನ್ನು ನಾನು ಕಾಣೆ. ನೀವು ಈ ಕೆಲಸ ಕೈಗೊಳ್ಳುವಿರಾ? ಮೊದಲು ಈ ವಿಷಯವಾಗಿ ಒಂದು ಉಜ್ಜ್ವಲ ಪುಸ್ತಿಕೆಯನ್ನು ಬರೆಯಿರಿ. ಅದರ ಪ್ರಕಟನೆಯ ಭಾರ ನನ್ನದು.

ಸಾದರ ಪ್ರೇಮದೊಡನೆ, ಪ್ರಿಯ ಸ್ವಾಮೀಜಿ,
ನಾನು, ನಿಮ್ಮ ವಿಶ್ವಾಸಿ
*ಜಮ್‌ಶೆಟ್‌ಜಿ ಎನ್. ಟಾಟಾ*

(ನೋಡಿ *Life of Swami Vivekananda*, Advaita Ashrama)

ತಮ್ಮ ಸಂಸ್ಥೆಗೆ ಸ್ವಾಮಿ ವಿವೇಕಾನಂದರೇ ನಿರ್ದೇಶಕರಾಗಿರಬೇಕೆಂದು ಜಮ್‌ಶೆಟ್‌ಜಿ ಬಯಸಿದರು. ಸ್ವಾಮಿ ವಿವೇಕಾನಂದರಿಗೆ ದೇಶದ ವೈಜ್ಞಾನಿಕ ಪ್ರಗತಿಯ ಬಗ್ಗೆ ಇದ್ದ ಕಾಳಜಿ ಜಮ್‌ಶೆಟ್‌ಜಿಯವರಿಗೆ ಬಲವಾದ ಪ್ರೇರಕ ಶಕ್ತಿಯಾಯಿತು.

### ಅಮೆರಿಕದಲ್ಲಿ ಭಾಷಣಗಳು

ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿ ತಮ್ಮ ಮೊದಲ ಶಿಕಾಗೋ ಉಪನ್ಯಾಸಗಳಿಂದಲೇ ಹಿಂದೂಧರ್ಮ, ಭಾರತೀಯ ಜನಜೀವನ ಮತ್ತು ಸಂಸ್ಕೃತಿ ಈ ವಿಷಯಗಳನ್ನು ಕುರಿತು ಮಾತನಾಡಿ ಕ್ರಿಶ್ಚಿಯನ್ ಮಿಶನರಿಗಳು ಅಮೆರಿಕದಲ್ಲಿ ಹಿಂದೂಧರ್ಮ, ಭಾರತದ

ವಿಷಯದಲ್ಲಿ ನಡೆಸಿದ್ದ ಅಪಪ್ರಚಾರ, ವಿಕೃತ ಭಾವನೆಗಳನ್ನು ನಿವಾರಿಸಲು ಯತ್ನಿಸಿದರು. ಹೊಸದಾಗಿ ವೇದಾಂತದ ವಿಷಯವನ್ನು ಎತ್ತಿಕೊಂಡು ವ್ಯಾಪಕವಾಗಿ ಅದರ ಪ್ರಚಾರ ಮಾಡಿದರು.

ಇವಲ್ಲದೆ ಅನೇಕ ಕಡೆಗಳಲ್ಲಿ ಸ್ವಾಮೀಜಿ ವಿಜ್ಞಾನದ, ಅದರಲ್ಲಿಯೂ ಭಾರತೀಯ ವಿಜ್ಞಾನ ಪರಂಪರೆಯ ವಿಷಯವನ್ನು ಕುರಿತು ಮಾತನಾಡುವುದನ್ನು ನೋಡಬಹುದು. ಅವರು ಅಮೆರಿಕಕ್ಕೆ ಎರಡನೆಯ ಪ್ರವಾಸ ಮಾಡಿದಾಗ ಕೆಲಿಫೋರ್ನಿಯದಲ್ಲಿ ಇಂತಹ ಅನೇಕ ಭಾಷಣಗಳನ್ನು ಮಾಡುವುದನ್ನು ನೋಡುತ್ತೇವೆ. ಲಾಸ್ ಏಂಜಲೀಸ್‌ನಲ್ಲಿ ೧೮೯೯ರ ಡಿಸೆಂಬರಿನಲ್ಲಿ "ದೂರದ ಭಾರತದಲ್ಲಿ ವಿಶ್ವದ ಬಗೆಗೆ ಪರಿಕಲ್ಪನೆ"ಯ ಕುರಿತಾಗಿ ಉಪನ್ಯಾಸ ನೀಡಿದರು. ವಿಶ್ವಪರಿಕಲ್ಪನೆಗಳ ವಿಷಯವಾಗಿ ಅದೇ ಸಮಯದಲ್ಲಿ ಅವರು ದಕ್ಷಿಣ ಕೆಲಿಫೋರ್ನಿಯದ ವಿಜ್ಞಾನದ ಅಕೆಡೆಮಿಯಲ್ಲಿ ಭಾಷಣ ಮಾಡಿದರು. ೧೯೦೦ರ ಜನವರಿಯಲ್ಲಿ ಲಾಸ್ ಏಂಜಲೀಸ್‌ನಲ್ಲಿಯೇ "ಮನಶ್ಶಕ್ತಿ"ಯನ್ನು ಕುರಿತು ಅವರು ಮಾತನಾಡಿ ಭೌತವಿಜ್ಞಾನಗಳ ವ್ಯಾಪ್ತಿಗೆ ಮೀರಿದ ತಮ್ಮ ಕೆಲವು ಅನುಭವಗಳನ್ನು ವಿವರಿಸುತ್ತಾರೆ. ಅವರು ಅನೇಕ ಭಾಷಣಗಳನ್ನು ವಿಶ್ವ, ವಿಶ್ವಶಾಸ್ತ್ರ, ಸೃಷ್ಟಿತತ್ತ್ವ, ಹಿಂದೂಮನೋವಿಜ್ಞಾನ— ಮುಂತಾದ ವಿಷಯಗಳ ಮೇಲೆ ಮಾಡಿರುವುದನ್ನು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಲ್ಲಿ ನೋಡಬಹುದು. ಈ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರು ಭಾರತೀಯ ಪುರಾತನ ವಿಜ್ಞಾನವನ್ನೂ, ಆಧುನಿಕ ಪಾಶ್ಚಿಮಾತ್ಯ ವಿಜ್ಞಾನವನ್ನೂ ಹೋಲಿಸಿ ಚರ್ಚಿಸಿದ್ದಾರೆ. ಇಲ್ಲಿ ವೈಜ್ಞಾನಿಕ ಸಂಶೋಧನೆಗೆ ವಸ್ತುವಾಗಬಲ್ಲ ಹಲವು ತತ್ತ್ವಗಳನ್ನು ನಾವು ನೋಡಬಹುದು.

> ವಿಜ್ಞಾನದ ವಿವಿಧ ಮಾರ್ಗಗಳು ಚಕ್ರದ ಅರೆಗಳು ಹೇಗೆ ಕೇಂದ್ರಬಿಂದುವಿನಲ್ಲಿ ಒಂದಾಗುತ್ತವೆಯೋ ಹಾಗೆ ಒಂದೇ ಸತ್ಯದ ಕಡೆಗೆ ಚಲಿಸುತ್ತಿವೆ.
>
> — ಸ್ವಾಮಿ ವಿವೇಕಾನಂದ

### ದಿ ಈಥರ್

ಇಂಗ್ಲಿಷ್‌ನಲ್ಲಿ "*The Complete Works of Swami Vivekananda*"ದ ೯ನೇ ಸಂಪುಟ ೧೯೯೭ರಲ್ಲಿ ಮೊದಲು ಪ್ರಕಟವಾಯಿತು. ಇದರ ಕನ್ನಡ ಅನುವಾದ ಈಗ ಆಗುತ್ತಿದೆ. ಈ ಗ್ರಂಥದಲ್ಲಿ *New York Medical Times* ಪತ್ರಿಕೆಯಲ್ಲಿ ಸ್ವಾಮಿ ವಿವೇಕಾನಂದರು '*The Ether*' ಎಂಬ ಲೇಖನ ಬರೆದಿರುವುದನ್ನು ನೋಡಬಹುದು. ಈ ಲೇಖನದಲ್ಲಿ ಸ್ವಾಮಿ ವಿವೇಕಾನಂದರು ೧೮೯೫ರಲ್ಲಿ ತಿಳಿದಿದ್ದ ಭೌತಶಾಸ್ತ್ರ ವಿಜ್ಞಾನದ ವಿಷಯಗಳನ್ನೆಲ್ಲಾ ಕ್ರೋಡೀಕರಿಸಿ ನಿರೂಪಿಸಿರುವುದನ್ನು ನೋಡುತ್ತೇವೆ. ಅಲ್ಲಿಂದ ಒಂದೆರಡು ದಶಕಗಳ ನಂತರ ಈಥರ್ ಎಂಬ ಮಾಧ್ಯಮ ಯಾವುದೂ ಇಲ್ಲವೆಂಬ ಐನ್‌ಸ್ಟೈನ್‌ನ ಸಿದ್ಧಾಂತವನ್ನು ಎಲ್ಲರೂ ಒಪ್ಪಿಕೊಂಡರು. ಆನಂತರದ ವಿಜ್ಞಾನದಲ್ಲಿ ಈ ಪದವನ್ನು ಎಲ್ಲಿಯೂ ಕಾಣಲಾಗುವುದಿಲ್ಲ. [ಇತ್ತೀಚೆಗೆ ಈಥರ್ (*Ether*) ಕಲ್ಪನೆ ಮತ್ತೆ ಪುನರುಜ್ಜೀವನಗೊಳ್ಳುತ್ತಿರುವುದು ಗಮನಾರ್ಹ.] ಮೇಲೆ ತಿಳಿಸಿದ ಲೇಖನದಲ್ಲಿ ವಿಜ್ಞಾನದ ಇತರ ವಿಷಯಗಳನ್ನೂ ಸ್ವಾಮಿ ವಿವೇಕಾನಂದರು ಸೊಗಸಾಗಿ ವಿವರಿಸಿರುವುದನ್ನು ಕಾಣಬಹುದು.

ಲೇಖನದ ಮೊದಲ ಭಾಗದಲ್ಲಿ ವೈಜ್ಞಾನಿಕ ಅನ್ವೇಷಣೆಯ ಮಾರ್ಗವನ್ನು ವರ್ಣಿಸುತ್ತಾ ವಿಜ್ಞಾನದ ವಿವಿಧ ಮಾರ್ಗಗಳು ಚಕ್ರದ ಅರೆಗಳು ಹೇಗೆ ಕೇಂದ್ರಬಿಂದುವಿನಲ್ಲಿ ಒಂದಾಗುತ್ತವೆಯೋ ಹಾಗೆ ಒಂದೇ ಸತ್ಯದ ಕಡೆಗೆ ಚಲಿಸುತ್ತಿವೆಯೆಂದು ತೋರಿಸಿದ್ದಾರೆ. ಉಪನಿಷತ್ತುಗಳಲ್ಲಿ ಬರುವ "ಆಕಾಶ"ವೆ ಗ್ರೀಕರ "ಈಥರ್" ಎಂದು ತಿಳಿಸುತ್ತಾ ಜ್ಞಾನದ ಏಕತೆಯನ್ನು ಕುರಿತ ಚರ್ಚೆ ಅಲ್ಲಿದೆ. ನ್ಯೂಟನ್ನಿನ ಬೆಳಕಿನ ಸಿದ್ಧಾಂತ —ಬೆಳಕು ಕಣಗಳ ಪ್ರವಾಹ ಎಂಬ ವಿವರಣೆ— ಮತ್ತು ಹಯ್‌ಜೆನ್ಸ್‌ನ ಬೆಳಕಿನ-ಅಲೆಗಳ ಸಿದ್ಧಾಂತಗಳನ್ನು ಸ್ಥೂಲವಾಗಿ ವಿವರಿಸಿ ಈಥರ್ ಈ ಅಲೆಗಳ ಮಾಧ್ಯಮ ಎಂಬ ಆಗಿನ ಕಾಲದ ವೈಜ್ಞಾನಿಕ ನಂಬಿಕೆಯನ್ನು ಪುಷ್ಟಿಗೊಳಿಸಿದ್ದಾರೆ. ವಿಜ್ಞಾನದ ಇಂದಿನ ಗುರಿ *Unified Field Theory*, ಎಂದರೆ ವಿಜ್ಞಾನದ ಎಲ್ಲ ಶಕ್ತಿಗಳೂ ಒಂದೇ ಮೂಲಶಕ್ತಿಯ ವಿಭಿನ್ನ ಪ್ರಭೇದಗಳು ಎಂದು ಸಿದ್ಧಮಾಡುವುದಾಗಿದೆ. ಇದನ್ನು ಸ್ವಾಮೀಜಿ ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಜೋಲ್‌ನರ್ ಮತ್ತು ವೇಬರ್ ಎಂಬ ವಿಜ್ಞಾನಿಗಳ ಕಾರ್ಯವನ್ನು ವಿವರಿಸಿರುತ್ತಾರೆ. ಹಿಂದೂ ಮನಶ್ಶಾಸ್ತ್ರದ ಒಂದು ಮುಖ್ಯ ನಂಬಿಕೆ—ಮನಸ್ಸೂ ಸಹ ಒಂದು ರೀತಿಯ ಜಡ ವಸ್ತುವೇ—ಎಂಬ ವಿಷಯವನ್ನು ಸ್ವಾಮಿ ವಿವೇಕಾನಂದರು ಲೇಖನದ ಟಿಪ್ಪಣಿಗಳಲ್ಲಿ ಸೇರಿಸಿದ್ದಾರೆ. ಅದ್ವೈತ ವೇದಾಂತದ ಬ್ರಹ್ಮತತ್ತ್ವದಲ್ಲಿ ಮನಸ್ಸು-ವಸ್ತುಗಳೆಲ್ಲ ಹರಡಿಕೊಂಡಿವೆಯೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

### ಸ್ವಾಮಿ ವಿವೇಕಾನಂದರ ಸಾಪೇಕ್ಷ ಸಿದ್ಧಾಂತ

ವಿಶ್ವದಲ್ಲಿ ಪ್ರಾಣ ಮತ್ತು ಆಕಾಶ ಹಾಸುಹೊಕ್ಕಾಗಿವೆ. ನಮ್ಮ ಪುರಾತನ ಶ್ರುತಿ-ಸ್ಮೃತಿಗಳಲ್ಲಿ ಇವುಗಳ ಉಲ್ಲೇಖ ಇರುತ್ತದೆ. ಪ್ರಾಣ ಎಂದರೆ ಶಕ್ತಿ; ಆಕಾಶ ಎಂದರೆ ಜಡವಸ್ತು ಎಂದು ಸ್ಥೂಲವಾಗಿ ಅರ್ಥೈಸಬಹುದು. ಪ್ರಾಣ-ಆಕಾಶಗಳು ಪರಸ್ಪರ ಬದಲಾಗುವುದು ಸಾಧ್ಯ ಎಂದು ಸ್ವಾಮಿ ವಿವೇಕಾನಂದರು ತಿಳಿದಿದ್ದರು. ೧೮೯೭ರಲ್ಲಿ ನವೆಂಬರ್ ೧೨ರಂದು ಲಾಹೋರಿನಲ್ಲಿ ಮಾಡಿದ "ವೇದಾಂತ" ಎಂಬ ಭಾಷಣದಲ್ಲಿ ಸ್ವಾಮೀಜಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಭಾಷಣದಲ್ಲಿ ಅವರು ಹೇಳಿದ್ದಾರೆ:

"..... ವಿಶ್ವರಚನೆಯನ್ನು ಕುರಿತ ಈ ಮೇಲಿನ ಜಿಜ್ಞಾಸೆಯಲ್ಲಿ ದ್ವೈತ ಭಾವವಿದೆ. ಐಕ್ಯಭಾವವಿನ್ನೂ ಸಂಭವಿಸಿಲ್ಲ. ಆಕಾಶದ, ಎಂದರೆ ಜಡಪ್ರಕೃತಿಯ ಐಕ್ಯಭಾವವಿದೆ. ಪ್ರಾಣದ ಎಂದರೆ ಶಕ್ತಿಗಳ ಐಕ್ಯಭಾವ ಇದೆ. ಹಾಗೆಯೇ ಮುಂದುವರಿದರೆ ಪ್ರಾಣ-ಆಕಾಶಗಳಲ್ಲಿ ಐಕ್ಯಭಾವವು ಲಭಿಸುವುದೇ? ಇವೆರಡನ್ನೂ ಕರಗಿಸಿ ಒಂದು ಮಾಡಲು ಸಾಧ್ಯವೇ? ಈ ವಿಷಯದಲ್ಲಿ ನಮ್ಮ ಆಧುನಿಕ ವಿಜ್ಞಾನವು ಮೂಕವಾಗಿದೆ. ಇದಕ್ಕೆ ಉತ್ತರವೇನೆಂದು ಅದು ಇನ್ನೂ ಕಂಡುಹಿಡಿದಿಲ್ಲ. ಒಂದು ವೇಳೆ ಅದು ಎಂದಾದರೂ ಕಂಡುಹಿಡಿಯುವ ಪಕ್ಷದಲ್ಲಿ (ಉಪನಿಷತ್ತಿನಲ್ಲಿ ಹೇಳಿರುವ ಪ್ರಾಣ-

ಆಕಾಶಗಳನ್ನು ಅದು ನಿಧಾನವಾಗಿ ಕಂಡುಹಿಡಿಯುತ್ತಿರುವಂತೆ) ಅದೂ ಉಪನಿಷತ್ತುಗಳ ಸಿದ್ಧಾಂತಕ್ಕೆ ಬರಬೇಕು." [ನೋಡಿ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೩, ಪುಟ.೨೪೯]

ಮೇಲೆ ಉಲ್ಲೇಖಿಸಿರುವ ಉಪನ್ಯಾಸವನ್ನು ನೀಡುವುದಕ್ಕೆ ಎರಡು ವರ್ಷಗಳ ಮೊದಲೇ ಸ್ವಾಮೀಜಿಯವರಿಗೆ ಈ ಭಾವನೆ ಬಂದಿದ್ದಿತು. ಈ ವಿಷಯವನ್ನು ಅವರು ಅಮೆರಿಕದಲ್ಲಿ ಒಬ್ಬ ಪ್ರಸಿದ್ಧ ವಿಜ್ಞಾನಿಯೊಡನೆ ಚರ್ಚಿಸಿದ್ದಾರೆ. ೧೮೯೫ರ ಸೆಪ್ಟೆಂಬರಿನಲ್ಲಿ ಸ್ವಾಮೀಜಿ ನ್ಯೂಯಾರ್ಕ್ ನಗರದಲ್ಲಿ ಭಾಷಣ ತರಗತಿಗಳನ್ನು ನಡೆಸಿದರು. ಆ ತರಗತಿಗೆ ಅಮೆರಿಕದ ಸಮಾಜದ ದಿಗ್ಗಜಗಳೆಲ್ಲ ಬರುತ್ತಿದ್ದರು. ಇವರ ಪೈಕಿ ನಿಕೋಲ ಟೆಸ್ಲಾ ಒಬ್ಬ ಅಸಾಧಾರಣ ಧೀಮಂತ ವಿಜ್ಞಾನಿ. ಇವನು ಎಂತಹ ಬುದ್ಧಿವಂತನೆಂದರೆ ಅವನ ದೃಷ್ಟಿಯಲ್ಲಿ ಎಡಿಸನ್ ಒಬ್ಬ ವಿಜ್ಞಾನಿಯೇ ಅಲ್ಲ. ೧೮೫೬ರಲ್ಲಿ ಯೂರೋಪಿನ ಸರ್ಬಿಯಾ ದೇಶದಲ್ಲಿ ಜನಿಸಿದ ಟೆಸ್ಲಾ ಯೂರೋಪಿನಲ್ಲಿಯೇ ವಿಜ್ಞಾನದ ಪರಿಣತಿಯನ್ನು ಪಡೆದು ಅನೇಕ ಆವಿಷ್ಕಾರಗಳನ್ನು ಮಾಡಿದ. ಅವನು ಮದುವೆಯಾಗಲೇ ಇಲ್ಲ. ಫ್ಯಾರಡೇ ಮತ್ತು ಎಡಿಸನ್ *Direct Current* (ಏಕಮುಖ ವಿದ್ಯುತ್ಪ್ರವಾಹ)ದ ಬಗ್ಗೆ ಮಾತ್ರ ತಿಳಿದಿದ್ದಾಗ ಟೆಸ್ಲಾ *Alternating Current* (ಪರ್ಯಾಯ ವಿದ್ಯುತ್‌ಪ್ರವಾಹ)ವನ್ನು ಕೈವಶ ಮಾಡಿಕೊಂಡು ಅದರ ಉತ್ಪತ್ತಿ, ನಿಯಂತ್ರಣ, ಉಪಯೋಗಗಳ ವಿಚಾರದಲ್ಲಿ ಮೂಲಭೂತ ಪ್ರಯೋಗಗಳನ್ನೂ ಸಿದ್ಧಾಂತಗಳನ್ನೂ ನಿಯಮಗಳನ್ನೂ ರಚಿಸಿದನು. ಆಮೇಲೆ ಅಮೆರಿಕಕ್ಕೆ ವಲಸೆ ಹೋಗಿ ತನ್ನ ಆವಿಷ್ಕಾರಗಳಿಂದ ಅಪಾರ ಹಣ ಗಳಿಸಿ ಅದನ್ನೆಲ್ಲ ಸಂಶೋಧನೆಗಾಗಿ ಧಾರಾಳವಾಗಿ ಖರ್ಚು ಮಾಡಿದನು. ಈತ ಅದ್ಭುತ ಯಶಸ್ಸು ಗಳಿಸಿ ೧೯೪೩ರಲ್ಲಿ ಮರಣ ಹೊಂದಿದ. ಈತನದು ಗಣಿತಶಾಸ್ತ್ರದಲ್ಲಿಯೂ ಸಿದ್ಧಹಸ್ತ.

ಸ್ವಾಮೀಜಿ ಟೆಸ್ಲಾ ಜೊತೆ ವೈಯಕ್ತಿಕ ಚರ್ಚೆಯಲ್ಲಿ ಪ್ರಾಣ-ಆಕಾಶ ಎಂದರೆ ಶಕ್ತಿ-ಜಡವಸ್ತುಗಳ ಐಕ್ಯತೆಯ ವಿಚಾರವನ್ನು ಚರ್ಚಿಸಿದ್ದರು. ೧೮೯೬ರ ಫೆಬ್ರುವರಿ ೮ರಂದು ಬರೆದ ಪತ್ರದಲ್ಲಿ ಟೆಸ್ಲಾ "ನಿಮ್ಮ ಪ್ರಶ್ನೆಗಳಿಗೆ ಪತ್ರಮುಖೇನ ಉತ್ತರ ಕೊಡುವುದು ಕಷ್ಟ. ಆದುದರಿಂದ ನೀವು ನನ್ನ ಪ್ರಯೋಗಾಲಯಕ್ಕೆ ಬಂದು ನಿಮ್ಮನ್ನು ಸಂಧಿಸುವ ಸಂತೋಷವನ್ನು ಮತ್ತೆ ಕೊಡುವಿರೆಂದು ಬಯಸುತ್ತೇನೆ. 45-E ಹ್ಯೂಸ್ಟನ್ ಸ್ಟ್ರೀಟ್‌ನ ನನ್ನ ಲ್ಯಾಬ್‌ಗೆ ಮುಂದಿನವಾರ ಯಾವತ್ತಾದರೂ ಬನ್ನಿ" ಎಂದು ಆಹ್ವಾನಿಸಿದ.

ನಾಲ್ಕೈದು ದಿನಗಳ ನಂತರ ಸ್ವಾಮೀಜಿ ತಮ್ಮ ಇಂಗ್ಲಿಷ್ ಶಿಷ್ಯ ಸ್ಟರ್ಡಿಗೆ, ೧೮೯೬ರ ಫೆಬ್ರವರಿ ೧೩ರಂದು ಬರೆದ ಪತ್ರದಲ್ಲಿ ಹೀಗೆ ತಿಳಿಸುತ್ತಾರೆ : "ಜಡವಸ್ತು ಮತ್ತು ಶಕ್ತಿ ಎರಡನ್ನೂ ಪ್ರಚ್ಛನ್ನ ಶಕ್ತಿಯನ್ನಾಗಿ ಪರಿವರ್ತಿಸುವ ಸಾಧ್ಯತೆಯನ್ನು ಗಣಿತದ ಮೂಲಕ ಸಾಧಿಸಿ ತೋರಿಸಬಹುದೆಂದು ಟೆಸ್ಲಾ ಯೋಚಿಸುತ್ತಿದ್ದಾರೆ. ಮುಂದಿನ ವಾರ ಆತನನ್ನು ನೋಡಿ ಈ ಹೊಸ ಗಣಿತಶಾಸ್ತ್ರದ ಸಾಧನೆಯನ್ನು ತಿಳಿಯಬೇಕೆಂದಿದ್ದೇನೆ. ಇದು ಹೀಗೆ ಸಿದ್ಧವಾದರೆ ವೇದಾಂತದ ವಿಶ್ವಶಾಸ್ತ್ರ (*Cosmology*) ಭದ್ರವಾದ ಬುನಾದಿಯ ಮೇಲೆ ನಿಲ್ಲುತ್ತದೆ. ಈಗೀಗ ನಾನು ವೇದಾಂತದ ವಿಶ್ವಶಾಸ್ತ್ರ ಮತ್ತು *Eschatology* (ಅಂತಿಮಗತಿಶಾಸ್ತ್ರ) ಅಧ್ಯಯನ ಮಾಡುತ್ತಿದ್ದೇನೆ. ವೇದಾಂತದಲ್ಲಿ ಪರಿಪೂರ್ಣ ಸಾಮರಸ್ಯ ನನಗೆ ಕಾಣಬರುತ್ತಿದೆ."

ಆದರೆ ಟೆಸ್ಲಾ ಈ ವಿಷಯದಲ್ಲಿ ಏನನ್ನಾದರೂ ಸಾಧಿಸಿರುವ ಕುರುಹು ನಮಗೆ ಎಲ್ಲಿಯೂ ಸಿಗುವುದಿಲ್ಲ. ಬಹುಶಃ ಈ ಪ್ರಯತ್ನದಲ್ಲಿ ವಿಫಲನಾಗಿರಬೇಕು (ನೋಡಿ, ಮೇರಿ ಲೂಯಿ ಬರ್ಕ್ ಅವರ *Swami Vivekananda in the West : New Discoveries* ಸಂಪುಟ ೩.)

ಸ್ವಾಮಿ ವಿವೇಕಾನಂದರು ಈ ವಿಷಯವನ್ನು ಚರ್ಚಿಸಿದ ಹತ್ತು ವರ್ಷಗಳ ನಂತರ ಯೂರೋಪಿನಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ೧೯೦೫ರಲ್ಲಿ ತನ್ನ ಕ್ರಾಂತಿಕಾರಕ ಸಂಶೋಧನೆಗಳನ್ನು ಪ್ರಕಟಿಸಿದನು. ಅವನ *Relativity Theory* (ಸಾಪೇಕ್ಷ ಸಿದ್ಧಾಂತ)ದಲ್ಲಿನ ಒಂದು ಬಹು ಮುಖ್ಯ ಪರಿಣಾಮ ಏನೆಂದರೆ ಶಕ್ತಿ-ವಸ್ತುಗಳನ್ನು ಪರಸ್ಪರ ಪರಿವರ್ತಿಸುವ ಸಾಧ್ಯತೆಯನ್ನು ತಿಳಿಸಿದ್ದು. m ಮೊತ್ತದ ದ್ರವ್ಯರಾಶಿಯ ಸ್ಥಳದಲ್ಲಿ E ಮೊತ್ತದ ಶಕ್ತಿ ಉತ್ಪನ್ನವಾಗುತ್ತದೆ. $E=mc^2$, ಇಲ್ಲಿ c ಎಂಬುದು ಬೆಳಕಿನ ವೇಗ. ಹೀಗೆ ಐನ್‌ಸ್ಟೈನ್ ತೋರಿಸಿದ ವಸ್ತು-ಶಕ್ತಿಗಳ ಐಕ್ಯವನ್ನು ಸ್ವಾಮೀಜಿ ಹತ್ತುವರ್ಷಗಳ ಮೊದಲೆ ತಮ್ಮ ವೇದಾಂತದ ಅಧ್ಯಯನದ ಮೂಲಕ ಊಹಿಸಿದ್ದರೆಂಬುದು ಬಹು ಆಶ್ಚರ್ಯಕರವಾಗಿದೆ.

$E=mc^2$ ಸಮೀಕರಣದ ಉಪಯೋಗದಿಂದಲೇ ಆಟಂ ಬಾಂಬ್ ಮತ್ತು ಹೈಡ್ರೋಜನ್ ಬಾಂಬ್‌ಗಳ ಆವಿಷ್ಕಾರ ಆಯಿತು ಎಂಬ ವಿಷಯವನ್ನು ಇಲ್ಲಿ ನಾವು ನೆನೆಯಬಹುದು.

(ಮುಂದುವರೆಯುವುದು)

## ಮನಸ್ಸು ಮತ್ತು ದ್ರವ್ಯ

ಮನಸ್ಸು ದ್ರವ್ಯವಾಗುವುದು, ದ್ರವ್ಯ ಮನಸ್ಸಾಗುವುದು. ಇದು ಕೇವಲ ಸ್ಪಂದನದ ತಾರತಮ್ಯ ಮಾತ್ರ. ಒಂದು ಉಕ್ಕಿನ ಸಲಾಕಿಯನ್ನು ತೆಗೆದುಕೊಂಡು, ಶಕ್ತಿಯನ್ನು ಅದರ ಮೂಲಕ ಹರಿಸಿ ಅದು ಸ್ಪಂದಿಸುವಂತೆ ಮಾಡಿ... ಇದನ್ನು ಒಂದು ಕತ್ತಲೆ ಕೋಣೆಯಲ್ಲಿ ಮಾಡಿದರೆ ಮೊದಲು ನಿಮ್ಮ ಅರಿವಿಗೆ ಬರುವುದೇ ಗುಂಯ್‌ಗುಟ್ಟುವ ಶಬ್ದ. ನೀವು ಸ್ಪಂದನವನ್ನು ಹೆಚ್ಚಿಸಿದರೆ ಆ ಉಕ್ಕಿನ ಸಲಾಕಿ ಕಾಂತಿಯಿಂದ ಕೋರೈಸುವುದು. ಸ್ಪಂದನವನ್ನು ಇನ್ನೂ ಹೆಚ್ಚು ಮಾಡಿದರೆ ಉಕ್ಕಿನ ಸಲಾಕಿ ಮಾಯವಾಗಿ ಹೋಗುವುದು. ಅದು ಮನಸ್ಸಾಗುವುದು.

—ಸ್ವಾಮಿ ವಿವೇಕಾನಂದ